# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1150 |
| ಸದಸ್ಯರ ಹೆಸರು | : ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : 19.12.2024 |
| ಉತ್ತರಿಸುವ ಸಚಿವರು | : ಗೃಹ ಸಚಿವರು |

| ಪ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಒಟ್ಟು ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಕೈಗೊಂಡ ಕಾರ್ಯಕ್ರಮಗಳೇನು: | ರಾಜ್ಯದಲ್ಲಿ ಒಟ್ಟು ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಕೈಗೊಂಡ ಕ್ರಮಗಳ ವಿವರವನ್ನು **ಅನುಬಂಧ-1 ರಲ್ಲಿ ಒದಗಿಸಲಾಗಿದೆ.** |
| (ಆ) | ರಾಜ್ಯದಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿ ಇರುವ ಪೊಲೀಸರ ಸಂಖ್ಯೆಯೆಷ್ಟು: ಇನ್ನೂ ಬೇಕಾಗಿರುವ ಪೊಲೀಸರ ಸಂಖ್ಯೆಯೆಷ್ಟು: (ವಿವರ ನೀಡುವುದು) | ಪೊಲೀಸ್ ಅನುಪಾತದ ಕುರಿತು ಪ್ರಸ್ತುತ ರಾಷ್ಟ್ರೀಯ ಮಟ್ಟದಲ್ಲಿ ಯಾವುದೇ ಮಾನದಂಡ ಇರುವುದಿಲ್ಲ. ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುವ ಬ್ಯೂರೋ ಆಫ್ ಪೊಲೀಸ್ ರಿಸರ್ಚ್ & ಡೆವೆಲಪ್‌ಮೆಂಟ್ (ಬಿಪಿಆರ್&ಡಿ) ರ ವತಿಯಿಂದ ಎಲ್ಲಾ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೊಲೀಸ್ ಸಂಘಟನೆಗಳ ಕುರಿತು ಭಾರತದ ಪೊಲೀಸ್ ಸಂಘಟನೆಗಳ ಕುರಿತು ಮಾಹಿತಿಯನ್ನು ಪ್ರಕಟಿಸಲಾಗುತ್ತಿದ್ದು, ಇದರನ್ವಯ 2023ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷ ಜನಸಂಖ್ಯೆಗೆ ಸುಮಾರು 165.04 ಸಂಖ್ಯೆ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುತ್ತಾರೆ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಸದರಿ ಅನುಪಾತವು ಒಂದು ಲಕ್ಷ ಜನಸಂಖ್ಯೆಗೆ 196.88 ಇರುತ್ತದೆ. |
| (ಇ) | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಗಳ ನೇಮಕಾತಿ ಮಾಡಲಾಗಿದೆ: ಪ್ರಸ್ತುತ, ಇರುವ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳ ಸಂಖ್ಯೆ ಎಷ್ಟು: ಈ ಹುದ್ದೆಗಳನ್ನು ಭರ್ತಿ ಮಾಡಲು ಇಲಾಖೆ ಕ್ರಮಕೈಗೊಳ್ಳುವುದೇ? (ವಿವರ ನೀಡುವುದು) | ಪೊಲೀಸ್ ಇಲಾಖೆಯಲ್ಲಿ ಕಳೆದ 03 ವರ್ಷಗಳಲ್ಲಿ ಪಿ.ಎಸ್.ಐ ವೃಂದದ ಈ ಕೆಳಕಂಡ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.<br><br>**ಹುದ್ದೆ** — **ಸಂಖ್ಯೆ**<br>ಪಿ.ಎಸ್.ಐ (ಸಿವಿಲ್) ಕ್ರೀಡಾ ಮೀಸಲಾತಿ ಹುದ್ದೆಗಳು) — 12<br>ಆರ್.ಎಸ್.ಐ(ಸಿಎಆರ್/ಡಿ.ಎ.ಆರ್) — 70<br>ಪಿ.ಎಸ್.ಐ (ಕೆ.ಎಸ್.ಐ.ಎಸ್.ಎಫ್) — 63<br>ಸ್ಪೆ. ಆರ್.ಎಸ್.ಐ (ಕೆ.ಎಸ್.ಆರ್.ಪಿ/ಐ.ಆರ್.ಬಿ) — 70<br><br>ಪ್ರಸ್ತುತ ವಿವಿಧ ವೃಂದಗಳ ಮಂಜೂರಾತಿ ಬಲ, ವಾಸ್ತವ ಬಲ ಹಾಗೂ ರಿಕ್ತವಿರುವ ಪಿ.ಎಸ್.ಐ ಹುದ್ದೆಗಳ ಸಂಖ್ಯೆ ಹಾಗೂ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಳ್ಳಲಾದ ಕ್ರಮದ ವಿವರವನ್ನು **ಅನುಬಂಧ-2 ರಲ್ಲಿ ಒದಗಿಸಲಾಗಿದೆ.** |

ಸಂಖ್ಯೆ: ಒಇ 250 ಪಿಇಎಂ 2024

**(ಡಾ. ಜಿ ಪರಮೇಶ್ವರ)**
ಗೃಹ ಸಚಿವರು

ಅನುಬಂಧ-1:

**ಪ್ರಸ್ತುತ ರಾಜ್ಯದಲ್ಲಿ ಒಟ್ಟು ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಕೈಗೊಂಡ ಕಾರ್ಯಕ್ರಮಗಳ**

1. **ಪೊಲೀಸ್ ಐ.ಟಿ ವಿ2 ತಂತ್ರಾಂಶ:** ಎಫ್.ಐ.ಆರ್ ನೊಂದಣಿಯಿಂದ ಪ್ರಕರಣದ ವಿಲೇವಾರಿವರೆಗಿನ ಕಾರ್ಯ ಶೀಘ್ರವಾಗಿ ನಿರ್ವಹಿಸಲು ಮತ್ತು ನಾಗರೀಕರಿಗೆ ಹೆಚ್ಚಿನ ಸೇವೆಗಳನ್ನು ಒದಗಿಸಲು Artificial Intelligence (AI) and Machine Learning (ML) ತಂತ್ರಜ್ಞಾನವನ್ನು ಬಳಸಿ ಪೊಲೀಸ್ ಐ.ಟಿ ವಿ2 ತಂತ್ರಾಂಶವನ್ನು ವಿನ್ಯಾಸಗೊಳಿಸಲಾಗಿದ್ದು, ತಂತ್ರಾಂಶದ ಅಳವಡಿಕೆ ಕುರಿತು ಪ್ರಾಯೋಗಿಕ ಪರೀಕ್ಷೆ ಮಾಡಲಾಗುತ್ತಿದೆ.
2. **ಎಫ್.ಐ.ಆರ್/ಚಾರ್ಜ್‌ಶೀಟ್.ಗಳಲ್ಲಿ ಇ-ಸಹಿ :** ಪೊಲೀಸ್ ಐ.ಟಿ ತಂತ್ರಾಂಶದಲ್ಲಿ ಎಫ್.ಐ.ಆರ್ ಮತ್ತು ಚಾರ್ಜ್‌ಶೀಟ್‌ಗಳಲ್ಲಿ ಆಧಾರ್ ಆಧಾರಿತ ಇ-ಸಹಿಯನ್ನು ಮಾಡಿ ಸಂಬಂಧಪಟ್ಟ ನ್ಯಾಯಾಲಯಗಳಿಗೆ ರವಾನಿಸುವ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದೆ.
3. ಪೊಲೀಸ್ ಐ.ಟಿ ತಂತ್ರಾಂಶದಲ್ಲಿ ಪ್ರಥಮ ವರ್ತಮಾನ ವರದಿಯಲ್ಲಿ ಘಟನೆ ನಡೆದ ಸ್ಥಳದ ಅಕ್ಷಾಂಶ ಮತ್ತು ರೇಖಾಂಶಗಳ ವಿವರ ಭರ್ತಿ ಮಾಡುವುದನ್ನು ಕಡ್ಡಾಯಗೊಳಿಸಲಾಗಿದ್ದು ಶೇಕಡ 100 ರಷ್ಟು FIR ಗಳ ಅಪರಾಧ ಸ್ಥಳದ ಕುರಿತು ಜಿಯೋ ಲೋಕೇಷನ್ ಮಾಹಿತಿಯನ್ನು ಒಳಗೊಂಡಿರುತ್ತದೆ.
4. **ಬಾಡಿವೋರ್ನ್ ಕ್ಯಾಮೆರಾ:** ಘನ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದೇಶನದನ್ವಯ ತನಿಖಾಧಿಕಾರಿಗಳು ಅಪರಾಧ ಪ್ರಕರಣಗಳ ತನಿಖೆ ಸಂದರ್ಭದಲ್ಲಿ ಬಾಡಿವೋರ್ನ್ ಕ್ಯಾಮೆರಾ ಬಳಸಿ ಚಿತ್ರಿಕರಿಸಲಾದ ವಿಡಿಯೋಗಳನ್ನು ಪೊಲೀಸ್ ಐಟಿ ತಂತ್ರಾಂಶಕ್ಕೆ ರವಾನಿಸಲು ಅನುಕೂಲವಾಗುವಂತೆ "ಬಾಡಿವೋರ್ನ್ ಕ್ಯಾಮೆರಾ" ಎಂಬ ಮೊಬೈಲ್ ಅಪ್ಲಿಕೇಷನ್‌ನನ್ನು ಅಭಿವೃದ್ಧಿಪಡಿಸಲಾಗಿದೆ.
5. **ಅನುಕಂಪದ ಆಧಾರದ ನೇಮಕಾತಿ ಪೋರ್ಟಲ್:** ಅನುಕಂಪದ ಆಧಾರದ ನೇಮಕಾತಿಗೆ ಪಾರದರ್ಶಕವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ನೇಮಕಾತಿ ಪೋರ್ಟಲ್ ಅಭಿವದ್ಧಿಗೊಳಿಸಲಾಗಿದ್ದು ಪೋರ್ಟಲ್ ಅನ್ನು ತ್ವರಿತವಾಗಿ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಿದ್ದಕ್ಕಾಗಿ ಘನ ಕರ್ನಾಟಕ ಉಚ್ಚ ನ್ಯಾಯಾಲಯವು ಪ್ರಶಂಸನೆ ವ್ಯಕ್ತಪಡಿಸುತ್ತದೆ.
6. **AFIS (Automated Fingerprint Identification System)** ಅನುಮಾನಸ್ಪಾದ ವ್ಯಕ್ತಿಗಳ ಅಪರಾಧ ಹಿನ್ನೆಲೆಯನ್ನು ಪರಿಶೀಲಿಸಲು AFIS ನಲ್ಲಿ ಲಭ್ಯವಿರುವ ದತ್ತಾಂಶಗಳನ್ನು ಬಳಸಿ mCCTNS mobile application ಅನ್ನು ಅಭಿವೃದ್ಧಿಪಡಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದ್ದು, ಪರೀಕ್ಷೆಗೆ ಒಳಪಡಿಸಲಾದ 30,54,486 ಮಾದರಿಗಳಲ್ಲಿ 32,367 ಅಪರಾಧ ಹಿನ್ನೆಲೆವುಳ್ಳ ವ್ಯಕ್ತಿಗಳ ಬೆರಳು ಮುದ್ರೆ ಪತ್ತೆ ಹಚ್ಚಲಾಗಿದೆ.
7. ಪೊಲೀಸ್ ಗಣಕ ವಿಭಾಗ/ಎಸ್.ಸಿ.ಆರ್.ಬಿ ವತಿಯಿಂದ ಇಲಾಖೆಯ ದೈನಂದಿನ ಕಾರ್ಯವನ್ನು ಸುಗಮವಾಗಿ ಹಾಗೂ ಶೀಘ್ರವಾಗಿ ನಿರ್ವಹಿಸಲು ಕೆಳಕಂಡ App ಗಳನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದೆ.

- ಎಹೆಚ್‌ಟಿಯು (AHTU) ಮೊಬೈಲ್ ಆಪ್
- ಚಾಟ್ ಬಾಟ್(ಪೊಲೀಸ್ ಮಿತ್ರ)
- ಕೆ.ಎಸ್.ಪಿ.ಎ.ಐ
- ಆರ್ಥಿಕ ಅಪರಾಧಗಳ ತನಿಖಾ ತಂತ್ರಾಂಶ

8. **e-DAR (Electronic Detailed Accident Report):** i-RAD(Integrated Road Accident Database) ಯೋಜನೆಯನ್ನು 2021 ರಲ್ಲಿ NIC ವತಿಯಿಂದ ಜಾರಿಗೊಳಿಸಲಾಗಿದ್ದು, ರಾಜ್ಯದಲ್ಲಿ ಅಪಘಾತದ ವಿವರಗಳನ್ನು ದಾಖಲಿಸಲು ಸದರಿ ತಂತ್ರಾಂಶವನ್ನು ಪ್ರಾಯೋಗಿಕವಾಗಿ ಪರೀಕ್ಷಿಸಲಾಗುತ್ತಿದೆ.

9. **ಸ್ಮಾರ್ಟ್ ಇ-ಬೀಟ್:**
   - ಗಸ್ತು ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲ ಸ್ಮಾರ್ಟ್ ಇ-ಬೀಟ್ ಅಪ್ಲಿಕೇಶನ್ ಅನ್ನು ರಾಜ್ಯಾದ್ಯಂತ ಅಳವಡಿಸಲಾಗಿದ್ದು, ಜಿಯೋ ಲೋಕೇಶನ್ ವಿವರದೊಂದಿಗೆ ಸ್ಮಾರ್ಟ್‌ಬೀಟ್ ತಂತ್ರಾಂಶಕ್ಕೆ ಅಂದಾಜು 7500 ಬೀಟ್ ಪಾಯಿಂಟ್‌ಗಳನ್ನು ಸೇರಿಸಲಾಗಿದೆ.
   - ಎಂಒಬಿ, ರೌಡಿ ಶೀಟರ್ ಮತ್ತು ಹಿಸ್ಟರಿ ಶೀಟರ್ ಪಟ್ಟಿ ಮೆಲ್ವಿಚಾರಣೆ ವ್ಯವಸ್ಥೆಯನ್ನು ಸ್ಮಾರ್ಟ್ ಇ-ಬೀಟ್ ನಲ್ಲಿ ಪರಿಚಯಿಸಲಾಗಿದ್ದು, ಮತ್ತು ಪೊಲೀಸ್ ಐಟಿ ತಂತ್ರಾಂಶದೊಂದಿಗೆ ಸಂಯೋಜಿಸಲಾಗಿದೆ.

10. **ಇ-ಎಫ್‌ಐಆರ್:** ಕಳುವಾದ ವಾಹನಗಳ ಕುರಿತು ನಾಗರೀಕರು ಆನ್‌ಲೈನ್‌ನಲ್ಲಿ ದೂರು ದಾಖಲಿಸಲು ಇ-ಎಫ್.ಐ.ಆರ್ ಸೇವೆಯನ್ನು ಜಾರಿಗೆ ತರಲಾಗಿದೆ.

11. **ಇ-ಚಲಾನ್ ಸಿಸ್ಟಂ:-** ಸಂಚಾರ ನಿಯಮಗಳ ಉಲ್ಲಂಘನೆಗಳಿಗಾಗಿ ದಂಡದ ಮಾಹಿತಿಯನ್ನು ಮೊತ್ತವನ್ನು ಮನೆಯಿಂದಲೇ ಪಡೆಯುವ ಹಾಗೂ ದಂಡದ ಮೊತ್ತವನ್ನು ಸುಲಭವಾಗಿ ಆನ್‌ಲೈನ್ ಪಾವತಿ ಮಾಡುವ ಅವಕಾಶ ಕಲ್ಪಿಸಲಾಗಿದೆ.

12. ಹೆದ್ದಾರಿಗಳಲ್ಲಿ ಸಂಭವಿಸುವ ರಸ್ತೆ ಅಪಘಾತಗಳಲ್ಲಿ ಗಾಯಗೊಂಡವರನ್ನು ತುರ್ತಾಗಿ **"Golden Hour"** ಒಳಗಾಗಿ ಸಮೀಪದ ಆಸ್ಪತ್ರೆಗೆ ದಾಖಲಿಸಿ ಪ್ರಾಣಾಪಾಯದಿಂದ ಪಾರು ಮಾಡಲು ಒಟ್ಟು 250 ಹೆದ್ದಾರಿ ಗಸ್ತುವಾಹನಗಳನ್ನು **Top Bar light, Reflective stickering** ಅಳವಡಿಸಿ ಘಟಕಗಳಿಗೆ ಹಂಚಿಕೆ ಮಾಡಲಾಗಿದೆ.

13. **ITMS (Intelligence Traffic Management Solutions):** ಅಪಘಾತ ನಿಯಂತ್ರಣಕ್ಕಾಗಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್.ವೇ ನಾ ವಿವಿಧ ಸ್ಥಳಗಳಲ್ಲಿ **ITMS((**Intelligence Traffic Management Solutions) ರಾಮನಗರ, ಮಂಡ್ಯ ಮತ್ತು ಮೈಸೂರು ನಗರ ಘಟಕಗಳಿಗೆ ಅನುಷ್ಠಾನಗೊಳಿಸಲಾಗಿದೆ. ಹಾಗೂ ರಾಜ್ಯದ ಎಲ್ಲಾ ಘಟಕಗಳಿಗೆ (ಬೆಂಗಳೂರು ನಗರ ಹೊರತುಪಡಿಸಿ) ಸ್ಪೀಡ್ ಡಿಕೆಕ್ಷನ್ ರೆಡಾರ್ ಗನ್ ಉಪಕರಣವನ್ನು ರೂ 9,81,79,345.00 ಗಳಲ್ಲಿ ಖರೀದಿ ಮಾಡಲಾಗಿದ್ದು ಹಂಚಿಕೆ ಮಾಡಲಾಗಿದೆ.

..3

14. ಸಾರ್ವಜನಿಕ ಇಂಟರ್ಫೇಸ್‌ಅನ್ನು ಉತ್ತಮ ಪಡಿಸಲು **ರಾಜ್ಯದ ಎಲ್ಲಾ ಘಟಕಗಳಿಗೆ (ಬೆಂಗಳೂರು ನಗರ ಹೊರತುಪಡಿಸಿ)** 741 **ಸಂಖ್ಯೆಯ ಬಾಡಿ ವೋರ್ನ್ ಕ್ಯಾಮೆರಾಗಳನ್ನು** ಪೊಲೀಸ್ ಸಿಬ್ಬಂದಿಗಳ ಬಳಕೆಗೆ ಹಂಚಿಕೆ ಮಾಡಲಾಗಿದೆ.

2024–25ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ–435 ರನ್ವಯ ರಾಜ್ಯದಲ್ಲಿ ಸೈಬರ್ ಕ್ರೈಂ ವಿಭಾಗವನ್ನು ಬಲಪಡಿಸಲು ಒಟ್ಟು 43 ಸಿಇಎನ್ (Cyber Economics Norcotics) ಪೊಲೀಸ್ ಠಾಣೆಗಳನ್ನು ಸರ್ಕಾರದ ಆದೇಶ ಸಂಖ್ಯೆ ಹೆಚ್‌ಡಿ 82 ಪಿಓಪಿ 2023, ದಿನಾಂಕ: 12.03.2024 ರನ್ವಯ ಡಿ.ಎಸ್.ಪಿ ದರ್ಜೆಗೆ ಉನ್ನತೀಕರಿಸಿ ಆದೇಶ ಹೊರಡಿಸಲಾಗಿದೆ.

16. **ಸಾಮಾಜಿಕ ಮಾಧ್ಯಮ ನಿರ್ವಹಣಾ ಕೋಶ** : ಸಾಮಾಜಿಕ ಮಾಧ್ಯಮಗಳ ಮೂಲಕ ಹರಡಲಾಗುತ್ತಿರುವ ಸುಳ್ಳು ಸುದ್ದಿಗಳಿಂದಾಗಿ ಸಾಮಾಜಿಕ ಶಾಂತಿ ಕದಡುವಿಕೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಭಂಗ ಪ್ರಕರಣಗಳು ಹೆಚ್ಚುತ್ತಿದ್ದು, ಇವುಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ರಾಜ್ಯದ ಎಲ್ಲಾ ಜಿಲ್ಲಾ/ನಗರ ಪೊಲೀಸ್ ಘಟಕಗಳಲ್ಲಿ "ಸಾಮಾಜಿಕ ಮಾಧ್ಯಮ ನಿರ್ವಹಣಾ ಕೋಶ" ಗಳನ್ನು ಸೃಜಿಸಲಾಗಿದೆ.

17. ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳು ಸುದ್ದಿ ಮತ್ತು ಪ್ರಚೋದನಕಾರಿ ಭಾಷಣಗಳನ್ನು ಒಳಗೊಂಡಂತೆ ಸೈಬರ್ ಅಪರಾಧಗಳ ಕುರಿತು ಪ್ರಕರಣಗಳನ್ನು ದಾಖಲಿಸಿ, ತಪ್ಪಿತಸ್ಥರ ಮೇಲೆ ಕ್ರಮ ವಹಿಸಲಾಗುತ್ತಿದೆ. ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 103 ಪಿಓಪಿ 2023, ದಿನಾಂಕ: 09.01.2024 ರನ್ವಯ ಒಂದು ಎ.ಡಿ.ಜಿ.ಪಿ ಸೈಬರ್ ಅಪರಾಧಗಳು ಮತ್ತು ಮಾದಕ ವಸ್ತು ಹುದ್ದೆಯನ್ನು ಮತ್ತು ಒಂದು ಡಿ.ಐ.ಜಿ.ಪಿ. ಮಾದಕ ದ್ರವ್ಯ ಮತ್ತು ಸೈಬರ್ ಅಪರಾಧಗಳು ಹುದ್ದೆಯನ್ನು ಸೃಜಿಸಲಾಗಿದ್ದು, ಪೊಲೀಸ್ ಠಾಣೆಗಳ ಮಟ್ಟದಲ್ಲಿಯೂ ಸಾಮಾಜಿಕ ಜಾಲತಾಣಗಳ ಮೇಲೆ ನಿಗಾ ಇಡಲಾಗಿದೆ.

18. **ಇಲಾಖೆಯ ಸೇವೆ ಕುರಿತು ಪ್ರತಿಕ್ರಿಯೆ (ಲೋಕ ಸ್ಪಂದನ):** ಪೊಲೀಸ್ ಠಾಣೆಗಳಲ್ಲಿ ಒದಗಿಸಲಾಗುವ ಸೇವೆಯ ಕುರಿತು ಸಾರ್ವಜನಿಕರಿಂದ ಪ್ರತಿಕ್ರಿಯೆಯನ್ನು ಪಡೆಯಲು ಡಿಜಿಟಲ್ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದ್ದು, ಸಾರ್ವಜನಿಕರಿಂದ ಸ್ವೀಕರಿಸಲಾಗುವ ದೂರು/ಕುಂದುಕೊರತೆಗಳನ್ನು ನಿರ್ವಹಿಸಲು ಹಾಗೂ ಸಾರ್ವಜನಿಕರೊಂದಿಗೆ ಸಿಬ್ಬಂದಿಗಳ ನಡವಳಿಕೆ ಸುಧಾರಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಹಕಾರಿಯಾಗಿದೆ.

19. **ವೈಜ್ಞಾನಿಕ ತನಿಖೆಗೆ ಒತ್ತು ನೀಡುವುದು:–** ಅಪರಾಧ ಪ್ರಕರಣಗಳ ತನಿಖೆಯ ಗುಣಮಟ್ಟವನ್ನು ಹೆಚ್ಚಿಸಲು, ವೈಜ್ಞಾನಿಕ ಪುರಾವೆಗಳನ್ನು ಕಲೆಹಾಕಲು SOCO (Scene of Crime Officers) ಅಧಿಕಾರಿಗಳನ್ನು ಹಾಗೂ ಮೊಬೈಲ್ ಫೋರೆನ್ಸಿಕ್ ವಾಹನಗಳನ್ನು ಘಟಕಗಳಿಗೆ ಹಂಚಿಕೆ ಮಾಡಲಾಗಿದ್ದು, ಇವುಗಳನ್ನು ರಾಜ್ಯಾದ್ಯಂತ ಪ್ರಮುಖ ಪ್ರಕರಣಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ.

20. **<u>ಬೆಂಗಳೂರು ನಗರ ಪೊಲೀಸ್ ಘಟಕದ ಬಲವರ್ಧನೆ:-</u>** ಬೆಂಗಳೂರು ನಗರ ಪೊಲೀಸ್ ಘಟಕದಲ್ಲಿ 2023-24 ಮತ್ತು 2024-25 ನೇ ಸಾಲಿನಲ್ಲಿ 02 ಹಂತದಲ್ಲಿ 06 ಮಹಿಳಾ ಪೊಲೀಸ್ ಠಾಣೆ, 05 ಸಂಚಾರ ಪೊಲೀಸ್ ಠಾಣೆಗಳ ಸೃಜನೆಯೊಂದಿಗೆ ಇತರ ವಿಶೇಷ ಘಟಕಗಳ ಬಲವರ್ಧನೆಗಾಗಿ ವಿವಿಧ ದರ್ಜೆಯ ಒಟ್ಟು 2454 ಹುದ್ದೆಗಳನ್ನು ಸರ್ಕಾರದ ಆದೇಶ ದಿನಾಂಕ: 14.09.2023 ರನ್ವಯ ಸೃಜಿಸಲಾಗಿದೆ.

21. **<u>ನೇಮಕಾತಿ:</u>** ಕಲ್ಯಾಣ ಕರ್ನಾಟಕ ವೃಂದದ ಎ.ಪಿ.ಸಿ-420 ಹುದ್ದೆಗಳು, ಕಲ್ಯಾಣ ಕರ್ನಾಟಕ ವೃಂದದ ಸಿ.ಪಿ.ಸಿ-454 ಹುದ್ದೆಗಳು ಮತ್ತು ಉಳಿಕೆ ಮೂಲ ವೃಂದದ ಎಪಿಸಿ 3064 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ನೇಮಕಾತಿ ವಿಭಾಗದಲ್ಲಿ ಕೈಗೊಳ್ಳಲಾಗಿದೆ.

22. ಪೊಲೀಸ್ ಇಲಾಖೆಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ವಿಶೇಷ ಗುಂಪು ವಿಮಾ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 75 ಪಿಓಪಿ 2023, ಬೆಂಗಳೂರು, ದಿನಾಂಕ:13/08/2024 ರಂತೆ ರೂ. 20 ಲಕ್ಷಗಳಿಂದ ರೂ.50 ಲಕ್ಷಗಳಿಗೆ ಹೆಚ್ಚಿಸಿ ಆದೇಶಿಸಲಾಗಿದೆ.

23. ಪೊಲೀಸ್ ಮೊಬಿಲಿಟಿ ಯೋಜನೆಯಡಿಯಲ್ಲಿ ಹಳೆ ವಾಹನಗಳನ್ನು ಹಂತಹಂತವಾಗಿ ಬದಲಾಯಿಸಿ ಇಲಾಖೆಯಲ್ಲಿ ಹೊಸ ವಾಹನಗಳನ್ನು ಸೇರ್ಪಡಿಗೊಳಿಸಲು ರೂ. 100.00 ಕೋಟಿಗಳ ಅನುದಾನ ಘೋಷಿಸಲಾಗಿದೆ ಹಾಗೂ ಜಾಮರ್ ವಾಹನಗಳ ಖರೀದಿಗೆ ರೂ. 31.31.00 ಕೋಟಿ ಅನುದಾನವನ್ನು ಬಿಡಿಗಡೆಮಾಡಲಾಗಿದೆ.

**<u>24. ಆಯವ್ಯಯ:</u>**

- 2024-25ನೇ ಸಾಲಿನ ಆಯವ್ಯಯದಲ್ಲಿ ವೇತನ ಅನುದಾನ ರೂ.7,86,477.00 ಲಕ್ಷಗಳು ಹಾಗೂ ವೇತನೇತರ ಅನುದಾನ ರೂ.1,44,481.77 ಲಕ್ಷಗಳು ಹೀಗೆ ಒಟ್ಟಾರೆಯಾಗಿ ರೂ.9,30,958.77 ಲಕ್ಷಗಳನ್ನು ಆಯವ್ಯಯದಲ್ಲಿ ನಿಗಧಿಪಡಿಸಲಾಗಿದೆ.

- **<u>ಪೊಲೀಸ್ ಗೃಹ 2025:-</u>** ಸರ್ಕಾರವು ಆದೇಶ ಸಂಖ್ಯೆ :ಹೆಚ್‌ಡಿ 93 ಪಿಬಿಎಲ್ 2020, ದಿನಾಂಕ :15.1.2021 ರಲ್ಲಿ ರಾಜ್ಯಾದ್ಯಂತ ಪೊಲೀಸ್ ಗೃಹ 2025 ಯೋಜನೆಯಡಿ ಒಟ್ಟು 10,034 ವಸತಿಗೃಹಗಳನ್ನು ನಿರ್ಮಾಣ ಮಾಡಲು ರೂ.2000.00 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ. ಸದರಿ ಯೋಜನೆಗಾಗಿ ಇದುವರೆವಿಗೂ ರೂ.900.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ನಾಲ್ಕು ಹಂತಗಳಲ್ಲಿ ಒಟ್ಟು 4,084 ವಸತಿಗೃಹಗಳ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. 1,908 ವಸತಿಗೃಹಗಳ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ 2,176 ವಸತಿಗೃಹಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

..5

- ಪೊಲೀಸ್ ಆಧುನೀಕರಣ ಯೋಜನೆ ಅಡಿ ಕೇಂದ್ರದ ಪಾಲು ರೂ.600.00 ಲಕ್ಷಗಳು ನಿಗಧಿಯಾಗಿದ್ದು ಹಾಗೂ ಹೆಚ್ಚುವರಿಯಾಗಿ ರೂ.462.00 ಲಕ್ಷಗಳು ಒದಗಿಸಲಾಗಿರುತ್ತದೆ. ರಾಜ್ಯದ ಪಾಲು- ರೂ.400.00 ಲಕ್ಷಗಳು ನಿಗಧಿಯಾಗಿದ್ದು ಹೆಚ್ಚುವರಿಯಾಗಿ ರೂ.308.00 ಲಕ್ಷಗಳು ಒದಗಿಸಲಾಗಿರುತ್ತದೆ ಹೀಗೆ ಒಟ್ಟಾರೆ ರೂ.1770.00 ಲಕ್ಷಗಳ ಅನುದಾನ ಸರ್ಕಾರದ ದಿಂದ ಬಿಡುಗಡೆಗೊಳಿಸಲಾಗಿರುತ್ತದೆ.
- 2023-24ನೇ ಸಾಲಿನಲ್ಲಿ ಆರೋಗ್ಯಭಾಗ್ಯ ಯೋಜನೆ ಹಾಗೂ ಕೇಂದ್ರ ಪೊಲೀಸ್ ಕಲ್ಯಾಣ ನಿಧಿಗೆ ಆರೋಗ್ಯ ಭಾಗ್ಯ ಯೋಜನೆಗಾಗಿ ರೂ.10000.00 ಲಕ್ಷಗಳಲ್ಲಿ ಮೊದಲನೇ ಮತ್ತು ಎರಡನೇ ತ್ರೈಮಾಸಿಕಕ್ಕೆ ರೂ.5000.00 ಲಕ್ಷಗಳ ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ.
- ಪೊಲೀಸ್ ಇಲಾಖೆಯ ನಿರ್ಮಾಣ ಅಡಿಯಲ್ಲಿ ರೂ.1700.00 ಲಕ್ಷಗಳಲ್ಲಿ ಡಿಸಿಪಿ, ಈಶಾನ್ಯ ವಿಭಾಗ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ರೂ.126.52 ಲಕ್ಷಗಳನ್ನು, ಬಿಡುಗಡೆ ಮಾಡಲಾಗಿದೆ.
- ಪೊಲೀಸ್ ತರಬೇತಿ ಶಾಲೆಗಳ ಬಲವರ್ಧನೆಗಾಗಿ ರೂ.499.56 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.
- ಕಲಬುರಗಿ ತಾಲ್ಲೂಕಿನ ನಾಗನಹಳ್ಳಿ ಗ್ರಾಮದ ಜಮೀನುಗಳಿಗೆ ಭೂ ಪರಿಹಾರ ಪಾವತಿ ಮಾಡಲು ರೂ.582.60ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.
- 2023-24ನೇ ಪೊಲೀಸ್ ಆಧುನೀಕರಣ ಯೋಜನೆ ಅಡಿ ಕೇಂದ್ರದ ಪಾಲು- ರೂ.763.00 ಲಕ್ಷಗಳು ನಿಗಧಿಯಾಗಿದ್ದು ರಾಜ್ಯದ ಪಾಲು- ರೂ.509.00 ಲಕ್ಷಗಳ ಅನುದಾನ ನಿಗಧಿಯಾಗಿದ್ದು ಹೀಗೆ ಒಟ್ಟಾರೆ ರೂ.1272.00 ಲಕ್ಷಗಳನ್ನು ಸರ್ಕಾರ ಬಿಡುಗಡೆಗೊಳಿಸಲಾಗಿದ್ದು ಪೂರ್ಣ ಅನುದಾನ ವೆಚ್ಚವಾಗಿರುತ್ತದೆ.
- ಪೊಲೀಸ್ ಠಾಣೆ/ಕಛೇರಿ ಕಟ್ಟಡಗಳ ನಿರ್ಮಾಣ ಕಾಮಗಾರಿ :- ಸರ್ಕಾರವು ಆದೇಶ ಸಂಖ್ಯೆ :ಹೆಚ್‌ಡಿ/49/ಪಿಬಿಎಲ್/2023, ದಿ :15/11/2023 ರಲ್ಲಿ 2023-24ನೇ ಸಾಲಿನಲ್ಲಿ ಪೊಲೀಸ್ ಇಲಾಖೆಯಲ್ಲಿನ ಮೂಲಭೂತ ಸೌಕರ್ಯಗಳನ್ನು ಉನ್ನತೀಕರಿಸಲು 03 ಪೊಲೀಸ್ ಠಾಣೆ, 01 ಹೊರ ಠಾಣೆ ಮತ್ತು 02 ಕಛೇರಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ರೂ.10,36,60,000/- ಗಳ ವೆಚ್ಚದಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ.
- ಪೊಲೀಸ್ ಠಾಣೆ/ಕಛೇರಿ ಕಟ್ಟಡಗಳ ನಿರ್ಮಾಣ:-2024-25ನೇ ಸಾಲಿನ ಆಯವ್ಯಯದಲ್ಲಿ ಸರ್ಕಾರವು ಆದೇಶ ಸಂಖ್ಯೆ:ಹೆಚ್‌ಡಿ/44/ಪಿಬಿಎಲ್ /2024, ದಿ:02/7/2024ರಲ್ಲಿ ಪೊಲೀಸ್ ಠಾಣೆ ಮತ್ತು ಕಛೇರಿಗಳಿಗೆ ನೂತನ ಕಟ್ಟಡ ನಿರ್ಮಾಣ ಮಾಡಲು ರೂ.30.00 ಕೋಟಿಗಳನ್ನು ಘೋಷಿಸಲಾಗಿದ್ದು, ಯೋಜನೆಯಡಿ 15 ಪೊಲೀಸ್ ಠಾಣೆ, 1 ಉಪ-ವಿಭಾಗ ಕಛೇರಿ, 2 ವೃತ್ತ ಕಛೇರಿ ಮತ್ತು 1 ಹೊರಠಾಣೆ ಕಟ್ಟಡಗಳನ್ನು ರೂ.2996.69 ಲಕ್ಷಗಳಲ್ಲಿ ನಿರ್ಮಾಣ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

## ಅನುಬಂಧ-2:

**ಪ್ರಸ್ತುತ ಇಲಾಖೆಯ ವಿವಿಧ ವೃಂದದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗಳ ಬಲಾಬಲದ ಮಾಹಿತಿ:**

| ಹುದ್ದೆ | ಮಂಜೂರಾತಿ ಬಲ | ಹಾಲಿ ಬಲ | ರಿಕ್ತಸ್ಥಾನ | | |
|---|---|---|---|---|---|
| | | | ಡಿಆರ್ | ಪಿಆರ್ | ಒಟ್ಟು |
| ಪಿ.ಎಸ್.ಐ(ಸಿವಿಲ್) | 3835 | 2704 | 1014 | 117 | 1131 |
| ಡಿ.ಎಸ್.ಐ | 70 | 17 | 53 | 0 | 53 |
| ಪಿ.ಎಸ್.ಐ(ರಾಜ್ಯಗುಪ್ತವಾರ್ತೆ) | 100 | 59 | 41 | 0 | 41 |
| ಆರ್.ಎಸ್.ಐ (ಸಿಎಆರ್/ಡಿಎಆರ್) | 496 | 428 | 47 | 21 | 68 |
| ಪಿ.ಎಸ್.ಐ(ಎಫ್.ಪಿಬಿ) | 53 | 40 | 13 | 0 | 13 |
| ಪಿ.ಎಸ್.ಐ (ನಿಸ್ತಂತು) | 181 | 152 | 29 | 0 | 29 |
| ಸ್ಪೆ.ಆರ್.ಎಸ್.ಐ (ಕೆ.ಎಸ್.ಆರ್.ಪಿ) | 361 | 289 | 52 | 20 | 72 |
| ಪಿ.ಎಸ್.ಐ (ಕೆಎಸ್.ಐ.ಎಸ್.ಎಫ್) | 226 | 163 | 0 | 63 | 63 |

**ರಿಕ್ತವಿರುವ ವಿವಿಧ ವೃಂದದ ಪಿ.ಎಸ್.ಐ ಹುದ್ದೆಗಳನ್ನು ಭರ್ತಿ ಮಾಡಲು, ಕೈಗೊಳ್ಳಲಾದ ಕ್ರಮದ ವಿವರ**

- ಪಿ.ಎಸ್.ಐ–545 ಹುದ್ದೆಗಳ ನೇಮಕಾತಿ ಅಧಿಸೂಚನೆಗೆ ಸಂಬಂಧಿಸಿದಂತೆ ಆಯ್ಕೆಯಾಗಿರುವ 505 ಅಭ್ಯರ್ಥಿಗಳ ನೇಮಕಾತಿ ಪ್ರಕ್ರಿಯೆಯು ಭಾಗಶಃ ಪೂರ್ಣಗೊಂಡಿದ್ದು, ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆ ಮತ್ತು ದಾಖಲಾತಿಗಳ ಪರಿಶೀಲನಾ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.
- ಪಿ.ಎಸ್.ಐ–402 ಹುದ್ದೆಗಳ ನೇಮಕಾತಿ ಅಧಿಸೂಚನೆಗೆ ಸಂಬಂಧಿಸಿದಂತೆ ದಿನಾಂಕ:06.11.2024 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ತಾತ್ಕಾಲಿಕ ಅಂಕಪಟ್ಟಿಯ ಅನುಸಾರ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತಧೆ.
- 15 ಡಿ.ಎಸ್.ಐ (ಎನ್‌ಕೆಕೆ) ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರವು ಅನುಮತಿ ನೀಡಿದ್ದು, ಸದರಿ ಹುದ್ದೆಗಳು ಹಾಗೂ 05 ಕಲ್ಯಾಣ ಕರ್ನಾಟಕ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲಾಗುತ್ತಿದೆ.
- ರಾಜ್ಯ ಗುಪ್ತವಾರ್ತೆ, ಎಫ್.ಪಿಬಿ, ನಿಸ್ತಂತು ಮತ್ತು ಕೆ.ಎಸ್.ಆರ್.ಪಿ ಘಟಕಗಳಲ್ಲಿ ರಿಕ್ತವಿರುವ ಪಿ.ಎಸ್.ಐ/ಆರ್.ಎಸ್.ಐ ವೃಂದದ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲು ಪರಿಶೀಲಿಸಲಾಗುತ್ತಿದೆ.
- ರಿಕ್ತ ಮುಂಬಡ್ತಿ ಹುದ್ದೆಗಳಿಗೆ ಅರ್ಹ ಸಿಬ್ಬಂದಿಗಳಿಗೆ ಮುಂಬಡ್ತಿ ನೀಡಿ ಭರ್ತಿ ಮಾಡುವ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.
- ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೇನೆನಿ 2024 ದಿನಾಂಕ:25.11.2024 ರಲ್ಲಿ ಒಳ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ಹೊಸದಾಗಿ ಯಾವುದೇ ಅಧಿಸೂಚನೆಯನ್ನು ಹೊರಡಿಸಬಾರದೆಂದು ನಿರ್ದೇಶಿಸಲಾದ ಕಾರಣ, ಎಲ್ಲಾ ನೇರ ನೇಮಕಾತಿ ಪ್ರಕ್ರಿಯೆಗಳನ್ನು ತಡೆಹಿಡಿಯಲಾಗಿದೆ.